All India Radio: Bangalore
National Bulletin In Kannada

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

25.06.2026 19.35 hrs

---

ಮುಖ್ಯಾಂಶಗಳು

- ಜನಪರ ಆಡಳಿತದಿಂದ ಪ್ರಜಾತಂತ್ರದ ಮೌಲ್ಯ ವರ್ಧನೆ - ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್
- ಬ್ರಿಕ್ಸ್ ಬಾಹ್ಯಾಕಾಶ ಏಜೆನ್ಸಿ ಸಭೆ; ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ದೂರ ಸಂವೇದಿ ಉಪಗ್ರಹಗಳ ಬಳಕೆ ಚರ್ಚೆ
- ರಾಷ್ಟ್ರೀಯ ಹೆದ್ದಾರಿ; ಅನಧಿಕೃತ ಪಾರ್ಕಿಂಗ್ ಹಾಗೂ ಒತ್ತುವರಿ ತೆರವಿಗೆ ಪ್ರಾಧಿಕಾರದ ಕ್ರಮ
- ಕಳೆದ ವರ್ಷ ವಿದೇಶಾಂಗ ಸಚಿವಾಲಯದಿಂದ ಒಂದೂವರೆ ಕೋಟಿಗೂ ಅಧಿಕ ಪಾಸ್‌ಪೋರ್ಟ್-ಸೇವೆ ವಿತರಣೆ
- ಫಿಫಾ ವಿಶ್ವಕಪ್ ಫುಟ್ಬಾಲ್; ಕೆನಡಾ-ಸ್ವಿಟ್ಜರ್‌ಲ್ಯಾಂಡ್ ಹಾಗೂ ಬೋಸ್ನಿಯಾ-ಕತಾರ್ ಇಂದು ಮುಖಾಮುಖಿ

---

ನಿಕಟ ಜನಪರ ಆಡಳಿತದಿಂದ ಪ್ರಜಾತಂತ್ರದ ಮೌಲ್ಯಗಳು ಬಲಗೊಳ್ಳುತ್ತವೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದ್ದಾರೆ.

ನವದೆಹಲಿಯಲ್ಲಿ ಇಂದು ಅವರು, ಪ್ರಜಾತಂತ್ರ ಕುರಿತಾದ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು. ನ್ಯಾಯ, ಸಮಾನತೆ ಹಾಗೂ ಸ್ವಾತಂತ್ರದ ಮೌಲ್ಯಗಳು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವವಾದ ಭಾರತದ ಸಂವಿಧಾನದ ಅಸ್ಮಿತೆಯಾಗಿದೆ.

ಅಧಿಕಾರದಲ್ಲಿರುವವರು ಹಾಗೂ ಜನ ಸಾಮಾನ್ಯರ ನಡುವಿನ ಅಂತರ ನಿವಾರಣೆಯಾಗಿ ಜನಕೇಂದ್ರಿತ ಆಡಳಿತ ನಿರ್ವಹಿಸುವ ಬಗ್ಗೆ ಪುಸ್ತಕದಲ್ಲಿ ವಿವರವಾಗಿ ತಿಳಿಸಲಾಗಿದೆ ಎಂದು ಹೇಳಿದರು.

ನೀಟ್ ಪರೀಕ್ಷೆ ಸಂದರ್ಭದಲ್ಲಿ ವಿದ್ಯಾರ್ಥಿಗಳ ಅನುಕೂಲ ಖಾತರಿಪಡಿಸಲು ಪ್ರಧಾನಿ ನರೇಂದ್ರ ಮೋದಿ ಅವರು, ವಿಮಾನ ನಿಲ್ದಾಣದಿಂದ ನಿರ್ಗಮನವನ್ನು ೪೫ ನಿಮಿಷಗಳ ಕಾಲ ಮುಂದೂಡಿದ ಘಟನೆಯನ್ನು ಉಪರಾಷ್ಟ್ರಪತಿಗಳು ಉಲ್ಲೇಖಿಸಿ ಇಂತಹ ವರ್ತನೆಗಳು ಜನಸೇವೆಯ ತತ್ವವನ್ನು ಸಾದರಪಡಿಸುತ್ತವೆ ಎಂದರು.

---

ಭಾರತ ಅಧ್ಯಕ್ಷತೆಯ ಬ್ರಿಕ್ಸ್ ಬಾಹ್ಯಾಕಾಶ ಏಜೆನ್ಸಿ ಸಭೆ ಬೆಂಗಳೂರಿನಲ್ಲಿ ಇಂದು ಮುಕ್ತಾಯವಾಯಿತು. ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಬಾಹ್ಯಾಕಾಶ ಖಾತೆ ಸಚಿವ ಡಾ.ಜಿತೇಂದ್ರ ಸಿಂಗ್ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಜಾಗತಿಕ ಬಾಹ್ಯಾಕಾಶ ಉಪಕ್ರಮಗಳಲ್ಲಿ ಭಾರತದ ಪಾತ್ರವನ್ನು ವಿವರಿಸಿದರು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ-ಇಸ್ರೋ ಅಧ್ಯಕ್ಷ ವಿ.ನಾರಾಯಣನ್ ಮಾತನಾಡಿ, ಬಾಹ್ಯಾಕಾಶ ಇಲಾಖೆಯ ಪ್ರತಿನಿಧಿಗಳು ಸೇರಿದಂತೆ ೧೦ ದೇಶಗಳ ೨೬ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ಅದರಲ್ಲೂ ವಿಶೇಷವಾಗಿ ಪ್ರಕೃತಿ ವಿಕೋಪ ಹಾಗೂ ಹವಾಮಾನ ಬದಲಾವಣೆ ಸಂದರ್ಭಗಳಲ್ಲಿ ದೂರ ಸಂವೇದಿ ಉಪಗ್ರಹಗಳ ಪ್ರಯೋಜನ ಕುರಿತಂತೆ ಸಭೆಯಲ್ಲಿ ಚರ್ಚಿಸಲಾಯಿತು ಎಂದು ತಿಳಿಸಿದರು.

ಸುಸ್ಥಿರ ಬಾಹ್ಯಾಕಾಶ ಕಾರ್ಯಾಚರಣೆ ಹಾಗೂ ತ್ಯಾಜ್ಯ ಮುಕ್ತ ಮಿಷನ್ ನಿರ್ವಹಣೆ ಕುರಿತಂತೆಯು ಪ್ರತಿನಿಧಿಗಳು ಚರ್ಚಿಸಿದರು ಎಂದು ನಾರಾಯಣನ್ ತಿಳಿಸಿದರು.

ಬ್ರಿಕ್ಸ್ ಬಾಹ್ಯಾಕಾಶ ಸಹಕಾರ ಚೌಕಟ್ಟಿಗೆ ಇನ್ನೂ ಅನೇಕ ದೇಶಗಳನ್ನು ಸೇರಿಸಿಕೊಳ್ಳುವ ನಿರೀಕ್ಷೆ ಇದೆ ಎಂದು ನಾರಾಯಣನ್ ಈ ಸಂದರ್ಭದಲ್ಲಿ ತಿಳಿಸಿದರು.

---

ಮಾದಕ ದ್ರವ್ಯ ಮಾರಾಟ ಹಾಗೂ ಬಳಕೆ ತಡೆಗಟ್ಟುವ ಪ್ರಯತ್ನಗಳನ್ನು ಬಲಪಡಿಸುವ ಉದ್ದೇಶದಿಂದ  ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ನಾಡಿದ್ದು ನವದೆಹಲಿಯಲ್ಲಿ ಉನ್ನತ ಮಟ್ಟದ ಸಭೆ ನಡೆಯಲಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರ ಮತ್ತು ಮಾದಕ ವಸ್ತು ಮಾರಾಟ ತಡೆಗಟ್ಟುವಲ್ಲಿ ಕಾರ್ಯನಿರ್ವಹಿಸುತ್ತಿರುವ ಏಜೆನ್ಸಿಗಳ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಗೃಹ ಸಚಿವಾಲಯ ತಿಳಿಸಿದೆ.

ಈ ಸಂದರ್ಭದಲ್ಲಿ ಅಮಿತ್ ಶಾ ಅವರು ಮಾದಕ ದ್ರವ್ಯ ನಿಯಂತ್ರಣ ಉಪಕ್ರಮ ಪತ್ರ ೨೦೨೮-೨೦೨೯'ನ್ನು ಬಿಡುಗಡೆ ಮಾಡಲಿದ್ದಾರೆ.

---

ತಾಯ್ನಾಡಿನ ಸಾರ್ವಭೌಮತೆಗಾಗಿ ಹೋರಾಡಿದ ರಾಣಿ ದುರ್ಗಾವತಿ ಅವರ ಹುತಾತ್ಮ ದಿನದ ಸಂದರ್ಭದಲ್ಲಿ ಇಂದು ಅವರಿಗೆ ಗೌರವ ನಮನ ಸಲ್ಲಿಸಲಾಯಿತು.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಮೊಘಲ್ ಅತಿಕ್ರಮಣಕಾರರ ವಿರುದ್ಧ ನಾಡಿನ ಸಂಸ್ಕೃತಿ ಮತ್ತು ಪರಂಪರೆ ಉಳಿಸಲು ಹೋರಾಡಿದ ರಾಣಿ ದುರ್ಗಾವತಿ, ಧೀರ ಮಹಿಳೆಯ ಪ್ರತೀಕವಾಗಿದ್ದಾರೆ. ಅವರ ಉತ್ಕಟ ಸೇವೆ, ಉತ್ತಮ ಆಡಳಿತ ಚಿರ ಸ್ಫೂರ್ತಿದಾಯಕವಾಗಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಾಣಿ ದುರ್ಗಾವತಿ ಮಾತೃ ಭೂಮಿಗಾಗಿ ಹೋರಾಡಿದ ಶೂರ ಮಹಿಳೆ. ಅವರ ಅಪ್ರತಿಮ ದೇಶಭಕ್ತಿ ನಿಸ್ವಾರ್ಥ ಸೇವೆ ಅಜರಾಮರ ಎಂದು ಕೊಂಡಾಡಿದ್ದಾರೆ.

---

ಪ್ರಸ್ತುತ ಜಾಗತಿಕ ವಿದ್ಯಮಾನದ ಹಿನ್ನೆಲೆಯಲ್ಲಿ ಭಾರತ-ದಕ್ಷಿಣ ಕೊರಿಯಾ ನಡುವಿನ ಸಂಬಂಧ ಬಲಗೊಳ್ಳುವ ಅವಶ್ಯಕತೆ ಇದೆ ಎಂದು ವಿದೇಶಾಂಗ ವ್ಯವಹಾರ ಖಾತೆ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ.

ಸಿಯೊಲ್‌ನಲ್ಲಿಂದು ದಕ್ಷಿಣ ಕೊರಿಯಾ ವಿದೇಶಾಂಗ ಸಚಿವ ಚೊ ಹ್ಯುನ್ ಅವರೊಂದಿಗೆ ನಡೆಸಿದ ಮಾತುಕತೆ ಸಂದರ್ಭದಲ್ಲಿ ಭಾರತ-ದಕ್ಷಿಣ ಕೊರಿಯಾ ಪರಸ್ಪರ ನಂಬಿಕೆ ಹಾಗೂ ಸಮಾನ ಮೌಲ್ಯಗಳನ್ನು ಹೊಂದಿದ್ದು, ಉಭಯ ದೇಶಗಳು ಮತ್ತಷ್ಟು ನಿಕಟವಾಗಿ ಕಾರ್ಯನಿರ್ವಹಿಸುವ ಅಗತ್ಯವಿದೆ ಎಂದರು.

ಸಭೆಯಲ್ಲಿ ರಾಜಕೀಯ, ಹಡಗು ನಿರ್ಮಾಣ, ವಾಣಿಜ್ಯ, ಬಂಡವಾಳ ಹೂಡಿಕೆ, ರಕ್ಷಣೆ, ತಂತ್ರಜ್ಞಾನ, ಶುದ್ಧ ಇಂಧನ, ಸಾಂಸ್ಕೃತಿಕ ವಿಚಾರ ವಿನಿಮಯ, ನವೋದ್ಯಮ ಅವಕಾಶ, ಫಿನ್‌ಟೆಕ್ ಮೊದಲಾದ ವಲಯಗಳಲ್ಲಿನ ಸಹಕಾರ ಕುರಿತಂತೆ ಪರಿಶೀಲನೆ ನಡೆಸಲಾಯಿತು ಎಂದು ಡಾ.ಎಸ್.ಜೈಶಂಕರ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

ಉಭಯ ದೇಶಗಳ ಒಪ್ಪಂದ ಮುಂದುವರೆಸುವ ಬಗ್ಗೆ ದಕ್ಷಿಣ ಕೊರಿಯಾ ವಿದೇಶಾಂಗ ಸಚಿವರು ವ್ಯಕ್ತಪಡಿಸಿರುವ ಬದ್ಧತೆ ಬಗ್ಗೆ ಡಾ.ಎಸ್.ಜೈಶಂಕರ್ ಮೆಚ್ಚುಗೆ ಸೂಚಿಸಿದ್ದಾರೆ.

---

ರಾಷ್ಟ್ರೀಯ ಹೆದ್ದಾರಿಗಳಲ್ಲಿನ ಅನಧಿಕೃತ ಪಾರ್ಕಿಂಗ್ ಮತ್ತು ಒತ್ತುವರಿಗಳನ್ನು ತಡೆಗಟ್ಟಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತೀವ್ರ ಸ್ವರೂಪದ ಕ್ರಮಗಳಿಗೆ ಮುಂದಾಗಿದೆ.

ಸುಪ್ರೀಂಕೋರ್ಟ್ ನೀಡಿದ ಅನುಪಾಲನೆಯ ಕ್ರಮವಾಗಿ ಪ್ರಾಧಿಕಾರ ವಿವಿಧ ರಾಜ್ಯಗಳಲ್ಲಿನ ೫೯೫ ತಾಣಗಳನ್ನು ಗುರುತಿಸಿದೆ. ಈ ಪ್ರದೇಶಗಳಲ್ಲಿರುವ ಅನಧಿಕೃತ ಪಾರ್ಕಿಂಗ್ ಹಾಗೂ ಒತ್ತುವರಿಗಳನ್ನು ತೆರವುಗೊಳಿಸುವಂತೆ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತಗಳ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ತಿಳಿಸಲಾಗಿದೆ.

ಈ ಉಪಕ್ರಮಗಳ ವ್ಯವಸ್ಥಿತ ಅನುಷ್ಠಾನಕ್ಕಾಗಿ ಹಾಗೂ ಸಾಂಸ್ಥಿಕ ಸಹಯೋಗವನ್ನು ಬಲಪಡಿಸುವ ನಿಟ್ಟಿನಲ್ಲಿ ಜಿಲ್ಲಾ ಹೆದ್ದಾರಿ ಸುರಕ್ಷತಾ ಕಾರ್ಯಪಡೆ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಅಂತರ ಸಂಸ್ಥೆ ಸಹಯೋಗಕ್ಕಾಗಿ ಮತ್ತು ಅನುಪಾಲನೆಯ ಉಸ್ತುವಾರಿ ನಿರ್ವಹಿಸಲು ನೋಡಲ್ ಅಧಿಕಾರಿ ನೇಮಕ ಮಾಡಲಾಗುತ್ತಿದೆ. ಸುಲಭ ಸಂಚಾರಕ್ಕಾಗಿ ಆಧುನಿಕ ಸಾರಿಗೆ ನಿರ್ವಹಣಾ ವ್ಯವಸ್ಥೆಗಳ ಪರಿಶೀಲನೆ ನಡೆಸುವಂತೆಯು ಪ್ರಾಧಿಕಾರ ಸೂಚಿಸಿದೆ.

---

ವಿದೇಶಾಂಗ ವ್ಯವಹಾರ ಸಚಿವಾಲಯ ೨೦೨೫ರಲ್ಲಿ ಒಂದೂವರೆ ಕೋಟಿಗೂ ಅಧಿಕ ಪಾಸ್‌ಪೋರ್ಟ್ ಹಾಗೂ ಅದಕ್ಕೆ ಸಂಬಂಧಿಸಿದ ಸೇವೆಗಳನ್ನು ಒದಗಿಸಿದೆ. ದೇಶಾದ್ಯಂತ ಇರುವ ೫೪೫ ಕೇಂದ್ರಗಳ ಮೂಲಕ ಭಾರತೀಯರಿಗೆ ಈ ಸೇವೆ ಕಲ್ಪಿಸಲಾಗಿದೆ ಎಂದು ಪಾಸ್‌ಪೋರ್ಟ್ ಸೇವಾ ದಿನದ ಸಂದರ್ಭದಲ್ಲಿ ಇಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಸುಮಾರು ಒಂದು ಕೋಟಿ ೪೭ ಲಕ್ಷ ಚಿಪ್ ಆಧಾರಿತ ಪಾಸ್‌ಪೋರ್ಟ್‌ಗಳನ್ನು ವಿತರಿಸಲಾಗಿದೆ.

---

ಭಾರತ ಮತ್ತು ಯುನೈಟೆಡ್ ಅರಬ್ ಎಮಿರೈಟ್ಸ್ ನಡುವಿನ ಉನ್ನತ ಮಟ್ಟದ ರಕ್ಷಣಾ ಸಹಕಾರ ಸಭೆ ನವದೆಹಲಿಯಲ್ಲಿ ಇಂದು ನಡೆಯಿತು.

ಭಾರತದ ಅಂತಾರಾಷ್ಟ್ರೀಯ ಸಹಕಾರ ಜಂಟಿ ಕಾರ್ಯದರ್ಶಿ ಅಮಿತಾಬ್ ಪ್ರಸಾದ್ ಹಾಗೂ ಯುಎಇನ ಬ್ರಿಗೇಡಿಯರ್ ಜಮಾಲ್ ಇಬ್ರಾಹಿಂ ಮೊಹಮ್ಮದ್ ಇಬ್ರಾಹಿಂ ಅಲ್‌ಮರ್ ಝೂಕಿ ಸಹ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಯಿತು.

ರಕ್ಷಣಾ ಉದ್ಯಮಗಳ ಸಹಕಾರ, ಆವಿಷ್ಕಾರಗಳ ಸಮನ್ವಯ, ಸಮುದ್ರಯಾನ ಭದ್ರತೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು ಎಂದು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದೆ.

---

ಕೇಂದ್ರಾಡಳಿತ ಪ್ರದೇಶದ ಲಡಾಖ್‌ನ ಲೇಹ್‌ನ ಹೆಮಿಸ್ ಬೌದ್ಧ ಪವಿತ್ರ ತಾಣದಲ್ಲಿ ಇಂದು ಹೆಮಿಸ್ ಉತ್ಸವ ೨೦೨೯ ಆರಂಭವಾಯಿತು. ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಪಾಲ್ಗೊಂಡಿದ್ದ ಉದ್ಘಾಟನಾ ಸಮಾರಂಭದಲ್ಲಿ ಬೌದ್ಧಧರ್ಮ ಶಾಲಾದ ಭಿಕ್ಷುಗಳು ಸಾಂಪ್ರದಾಯಿಕ ಪ್ರಾರ್ಥನೆ ಛಮ್ ಮುಖವಾಡದ ನೃತ್ಯ ಕಾರ್ಯಕ್ರಮ ನಡೆಸಿಕೊಟ್ಟರು.

ಎರಡು ದಿನಗಳ ಈ ಉತ್ಸವದಲ್ಲಿ ದೇಶ-ವಿದೇಶಗಳ ಬೌದ್ಧ ಪಂಡಿತರು, ಶ್ರದ್ಧಾಳುಗಳು, ಸಾಂಸ್ಕೃತಿಕ ವಿಚಾರಾಸಕ್ತರು ಪಾಲ್ಗೊಳ್ಳುತ್ತಿದ್ದಾರೆ.

---

ಕರ್ನಾಟಕದಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುಟುಂಬ ನಡೆಸುತ್ತಿರುವ ಸಂಸ್ಥೆಗೆ ಅಕ್ರಮವಾಗಿ ಭೂಮಿ ನೀಡಲಾಗಿದೆ ಎನ್ನುವ ಪ್ರಕರಣದ ಬಗ್ಗೆ ಬಿಜೆಪಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ನವದೆಹಲಿಯಲ್ಲಿ ಇಂದು ಪಕ್ಷದ ಕಚೇರಿಯಲ್ಲಿ ಮಾತನಾಡಿದ ಬಿಜೆಪಿ ವಕ್ತಾರ ಪ್ರದೀಪ್ ಭಂಡಾರಿ, ಏರೋಸ್ಪೇಸ್ ಹಾಗೂ ರಕ್ಷಣಾ ವಲಯದಲ್ಲಿನ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ೨೦೨೪ರಲ್ಲಿ ಸಂಸ್ಥೆಗೆ ೫ ಎಕರೆ ಜಮೀನನ್ನು ನೀಡಿದೆ. ಈ ಕ್ಷೇತ್ರದಲ್ಲಿ ಯಾವುದೇ ಪೂರ್ವ ಅನುಭವ ಇಲ್ಲದಿದ್ದರೂ ಈ ಸಂಸ್ಥೆಗೆ ನೂರಾರು ಕೋಟಿ ರೂಪಾಯಿ ಬೆಲೆಬಾಳುವ ಭೂಮಿಯನ್ನು ಹೇಗೆ ನೀಡಲಾಯಿತು ಎಂದು ಅವರು ಪ್ರಶ್ನಿಸಿದ್ದಾರೆ.

---

ಪಂಜಾಬ್ ಪೊಲೀಸರು ರಾಜ್ಯಾದ್ಯಂತ ನಡೆಸಿರುವ ಕಾರ್ಯಾಚರಣೆಯಲ್ಲಿ ಭಾರೀ ಪ್ರಮಾಣದ ಅಕ್ರಮ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ಗ್ಯಾಂಗ್‌ಸ್ಟರ್ ವಿರೋಧಿ ಕಾರ್ಯಪಡೆ ಜನವರಿಯಿಂದ ನಡೆಸಿದ ಕಾರ್ಯಾಚರಣೆಯಲ್ಲಿ ಇದುವರೆಗೆ ೭೧೩ ಅಕ್ರಮ ಶಸ್ತ್ರಾಸ್ತ್ರ ಹಾಗೂ ೨ ಸಾವಿರಕ್ಕೂ ಅಧಿಕ ಸುತ್ತಿನ ಮದ್ದುಗುಂಡುಗಳನ್ನು ವಶಪಡಿಸಿಕೊಂಡಿದೆ ಎಂದು ಪಂಜಾಬ್ ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ತಿಳಿಸಿದ್ದಾರೆ.

---

ಕೊಲ್ಕತ್ತಾದ ತರತಲಾ ಬಳಿ ನಿರ್ಮಾಣ ಹಂತದಲ್ಲಿದ್ದ ದಾಸ್ತಾನು ಮಳಿಗೆಯ ಮೇಲ್ಛಾವಣಿ ಕುಸಿದು ಕನಿಷ್ಠ ಐವರು ಮೃತಪಟ್ಟಿದ್ದಾರೆ.

ಗಾಯಗೊಂಡವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲಾಯಿತು. ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ.

---

ದೆಹಲಿಯಲ್ಲಿ ಆರ್.ಕೆ.ಆಶ್ರಮ್ ಮಾರ್ಗ ಮತ್ತು ಇಂದ್ರಪ್ರಸ್ಥ ಪ್ರದೇಶ ನಡುವೆ ಮೆಟ್ರೋ ರೈಲು ಸಂಪರ್ಕ ಕಲ್ಪಿಸುವ ಸೆಂಟ್ರಲ್ ವಿಸ್ತಾ ಕಾರಿಡಾರ್ ಯೋಜನೆ ಕಾಮಗಾರಿಗೆ ಕೇಂದ್ರ ವಸತಿ ಹಾಗೂ ನಗರ ವ್ಯವಹಾರ ಖಾತೆ ಸಚಿವ ಮನೋಹರ್ ಲಾಲ್ ಇಂದು ಚಾಲನೆ ನೀಡಿದರು.

ಸೆಂಟ್ರಲ್ ಸೆಕ್ರೇಟರಿಯೇಟ್ ಮೆಟ್ರೊ ನಿಲ್ದಾಣದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಸಚಿವ ಮನೋಹರ್ ಲಾಲ್, ಸುಮಾರು ೯ ಕಿಲೋಮೀಟರ್ ಉದ್ದದ ಈ ಕಾರಿಡಾರ್ ಒಟ್ಟು ೯ ಭೂಗತ ನಿಲ್ದಾಣಗಳನ್ನು ಹೊಂದಿರಲಿದೆ ಎಂದು ತಿಳಿಸಿದರು.

---

ಈಗ ಫಿಫಾ ವಿಶ್ವಕಪ್ ಫುಟ್ಬಾಲ್

ಕೆನಡಾದ ವ್ಯಾಂಕೊವರ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಕೆನಡಾ ಮತ್ತು ಸ್ವಿಟ್ಜರ್‌ಲ್ಯಾಂಡ್ ತಂಡಗಳು ಮುಖಾಮುಖಿಯಾಗಲಿವೆ.

ಸಿಯಾಟಲ್‌ನಲ್ಲಿ ನಡೆಯಲಿರುವ ಇನ್ನೊಂದು ಪಂದ್ಯದಲ್ಲಿ ಬೋಸ್ನಿಯಾ, ಕತಾರ್ ತಂಡವನ್ನು ಎದುರಿಸಲಿದೆ.

ಈ ಎರಡು ಪಂದ್ಯಗಳು ಭಾರತೀಯ ಕಾಲಮಾನ ರಾತ್ರಿ ೧೨.೩೦ಕ್ಕೆ ಪ್ರಾರಂಭವಾಗಲಿದೆ.

__________ ಮುಕ್ತಾಯ __________